**All India Radio: Bangalore**
**National Bulletin In Kannada**
**18.06.2025 / 1.10 pm**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**18.06.2025 / 1.10 pm**

**<><*<><>*><>**

ಮುಖ್ಯಾಂಶಗಳು

೧. ಭಾರತ-ಪಾಕ್ ಸಂಘರ್ಷದಲ್ಲಿ ಮೂರನೇ ವ್ಯಕ್ತಿ ಮಧ್ಯಸ್ತಿಕೆಯನ್ನು ದೇಶ ಎಂದೂ ಸ್ವೀಕರಿಸಿಲ್ಲ- ಪ್ರಧಾನಿ ನರೇಂದ್ರ ಮೋದಿ

೨. ಪರಸ್ಪರ ರಾಜಧಾನಿಗಳಿಗೆ ಹೈಕಮಿಷನರ್‌ಗಳ ಮರು ನಿಯೋಜನೆಗೆ ಭಾರತ - ಕೆನಡಾ ಒಪ್ಪಿಗೆ

೩. ಕೇಂದ್ರ ವಾಣಿಜ್ಯ ಸಚಿವ ಪಿಯುಷ್ ಗೋಯಲ್ ಇಂದಿನಿಂದ ಎರಡು ದಿನಗಳ ಬ್ರಿಟನ್ ಪ್ರವಾಸ; ಕಾರ್ಯತಂತ್ರ ಪಾಲುದಾರಿಕೆ ಬಲವರ್ಧನೆಗೆ ಒತ್ತು

೪. ಆಕ್ಸಿಯಮ್-೪ ಬಾಹ್ಯಾಕಾಶ ಮಿಷನ್ ಪುನಃ ಮುಂದೂಡಿಕೆ; ಇದೇ ೨೨ ರಂದು ನಡೆಸಲು ಯೋಜನೆ

೫. ನಾಲ್ಕು ರಾಷ್ಟ್ರಗಳ ಹಾಕಿ ಪಂದ್ಯಾವಳಿ; ಬರ್ಲಿನ್‌ಗೆ ತೆರಳಿದ ಭಾರತೀಯ ಕಿರಿಯರ ಪುರುಷರ ತಂಡ

><><><><><><><><<><><

ಇತ್ತೀಚಿನ ಮಿಲಿಟರಿ ಕಾರ್ಯಾಚರಣೆ, ಭಾರತ - ಪಾಕಿಸ್ತಾನ ನಡುವಿನ ಸಂಘರ್ಷಕ್ಕೆ ಅಮೆರಿಕ ಮಧ್ಯಸ್ಥಿಕೆ ಹಾಗೂ ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಕುರಿತು ಯಾವುದೇ ಮಟ್ಟದಲ್ಲಿ ಮಾತುಕತೆ ನಡೆದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಮಿಲಿಟರಿ ಕ್ರಮವನ್ನು ನಿಲ್ಲಿಸುವ ಕುರಿತು ಮಾತುಕತೆಗಳು ಭಾರತ ಮತ್ತು ಪಾಕಿಸ್ತಾನದ ಎರಡೂ ಮಿಲಿಟರಿಗಳ ನಡುವೆ ಸ್ಥಾಪಿಸಲಾದ ಅಸ್ತಿತ್ವದಲ್ಲಿರುವ ಮಾರ್ಗಗಳ ಅಡಿಯಲ್ಲಿ ನೇರವಾಗಿ ನಡೆದಿವೆ ಮತ್ತು ಅದು ಪಾಕಿಸ್ತಾನ ಕೋರಿಕೆಯ ಮೇರೆಗೆ ನಡೆದಿದೆ ಎಂದು ಅಧ್ಯಕ್ಷ ಟ್ರಂಪ್ ಅವರೊಂದಿಗೆ ೩೫ ನಿಮಿಷಗಳ ಕಾಲ ನಡೆದ ದೂರವಾಣಿ ಸಂಭಾಷಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಇತ್ತೀಚಿನ ಆಪರೇಷನ್ ಸಿಂಧೂರ್ ಬಗ್ಗೆಯೂ

ಚರ್ಚೆ ನಡೆದಿದೆ. ಇದೇ ವೇಳೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಮೆರಿಕಾಗೆ ಆಗಮಿಸಲು ಆಹ್ವಾನಿಸಿದ್ದು, ಪ್ರಧಾನಿ ಒಪ್ಪಿಗೆ ಸೂಚಿಸಿದ್ದಾರೆ. ದೂರವಾಣಿ ಸಂಭಾಷಣೆ ಕುರಿತು ಮಾಹಿತಿ ನೀಡಿರುವ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ಸಂಭಾಷಣೆಯ ಸಮಯದಲ್ಲಿ, ಭಾರತವು ಮೂರನೇ ವ್ಯಕ್ತಿಯ ಮಧ್ಯಸ್ಥಿಕೆಯನ್ನು ಎಂದಿಗೂ ಸ್ವೀಕರಿಸಿಲ್ಲ ಮತ್ತು ಭವಿಷ್ಯದಲ್ಲಿ ಅಂತಹ ಮಧ್ಯಸ್ಥಿಕೆಯನ್ನು ಸ್ವೀಕರಿಸುವುದಿಲ್ಲ ಎಂದು ಪ್ರಧಾನಿ ಪುನರುಚ್ಚರಿಸಿ ರುವುದಾಗಿ ತಿಳಿಸಿದ್ದಾರೆ.

><><><><<><><><<><><

ಭಾರತ ಹಾಗೂ ಕೆನಡಾ ಪರಸ್ಪರ ರಾಜಧಾನಿಗಳಿಗೆ ಹೈಕಮಿಷನರ್‌ಗಳನ್ನು ಮರು ನಿಯೋಜನೆ ಮಾಡಲು ಒಪ್ಪಿಕೊಂಡಿವೆ. ಜಿ-೭ ಶೃಂಗಸಭೆ ನೇಪಥ್ಯದಲ್ಲಿ  ಕನಾನಸ್ಕಿಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೆನಡಾ ಪ್ರಧಾನಿ ಮಾರ್ಕ್‌ಕಾರ್ನಿ ನಡುವೆ ದ್ವಿಪಕ್ಷೀಯ ಮಾತುಕತೆ ನಡೆಯಿತು. ಈ ವೇಳೆ ಉಭಯ ನಾಯಕರು ಪ್ರಜಾಪ್ರಭುತ್ವ ಮೌಲ್ಯಗಳು, ಕಾನೂನಿಗೆ ಗೌರವ, ಪ್ರಾದೇಶಿಕ ಸ್ವಾಯತ್ತತೆ ಮತ್ತು ಭೌಗೋಳಿಕ ಅಖಂಡತೆಯ ಸಂರಕ್ಷಣೆಯ ಕುರಿತು ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ಈ ಕುರಿತಂತೆ ಮಾಹಿತಿ ನೀಡಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಉಭಯ ನಾಯಕರು ಭಾರತ-ಕೆನಡಾ ಸಂಬಂಧಗಳನ್ನು ಬಲಪಡಿಸಲು ಒಮ್ಮತ ವ್ಯಕ್ತಪಡಿಸಿದ್ದು, ವ್ಯಾಪಾರ, ಜನರಿಂದ ಜನರ ಸಂಬಂಧ ಮತ್ತು ಸಂಪರ್ಕ ಕ್ಷೇತ್ರಗಳಲ್ಲಿ ಉನ್ನತಮಟ್ಟದ ಮಾತುಕತೆಗಳನ್ನು ಪುನರಾರಂಭಿಸುವ ಕುರಿತು ಒಪ್ಪಿಗೆ ಸೂಚಿಸಿರುವುದಾಗಿ ತಿಳಿಸಿದರು. ಇದೇ ವೇಳೆ, ಶುದ್ಧ ಇಂಧನ, ಡಿಜಿಟಲ್ ಪರಿವರ್ತನೆ, ಕೃತಕಬುದ್ಧಿಮತ್ತೆ, ಆರೋಗ್ಯ ಭದ್ರತೆ, ನಿರ್ಣಾಯಕ ಖನಿಜಗಳು, ಉನ್ನತ ಶಿಕ್ಷಣ, ಸಂಪರ್ಕ ಮತ್ತು ಪೂರೈಕೆ ಸರಪಳಿ ಸದೃಢತೆ ಕ್ಷೇತ್ರಗಳಲ್ಲಿ ಭವಿಷ್ಯದ ಪಾಲುದಾರಿಕೆಯ ಅವಕಾಶಗಳ ಕುರಿತು ಚರ್ಚೆ ನಡೆಸಲಾಗಿದೆ. ಹಾಗೂ ಪ್ರಮುಖವಾಗಿ ಸ್ವತಂತ್ರ ಮತ್ತು ಮುಕ್ತ ಇಂಡೋ ಪೆಸಿಫಿಕ್ ಪ್ರದೇಶಕ್ಕೆ ಬದ್ಧತೆ ವ್ಯಕ್ತಪಡಿಸಲಾಗಿದೆ ಎಂದು ವಿಕ್ರಮ್ ಮಿಸ್ರಿ ಮಾಹಿತಿ ನೀಡಿದರು.

><><><><<><><><<><><

ಪ್ರಧಾನಿ ನರೇಂದ್ರ ಮೋದಿ ಇಂದು ಕ್ರೊಯೇಷಿಯಾದ ಜಾಗ್ರೇಬ್‌ಗೆ ಆಗಮಿಸಲಿದ್ದಾರೆ. ಇದು ಕ್ರೊಯೇಷಿಯಾಗೆ ಭಾರತೀಯ ಪ್ರಧಾನಿಯೊಬ್ಬರ ಮೊದಲ ಭೇಟಿಯಾಗಿದ್ದು, ದ್ವಿಪಕ್ಷೀಯ ಸಂಬಂಧಗಳ ಹೊಸ ಅಧ್ಯಾಯಕ್ಕೆ ನಾಂದಿಹಾಡಲಿದೆ. ಈ ಭೇಟಿ, ನಿಯೋಗಮಟ್ಟದ ಮಾತುಕತೆಗಳು, ಪ್ರಮುಖ ವಲಯಗಳಲ್ಲಿ ಒಪ್ಪಂದಗಳು ಹಾಗೂ ಸಾಂಸ್ಕೃತಿ ಸಂವಹನವನ್ನು ಒಳಗೊಂಡಿರಲಿದ್ದು, ಉಭಯ ದೇಶಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು

ಬಲಗೊಳಿಸಲಿದೆ. ಭೇಟಿಯ ಭಾಗವಾಗಿ, ಭಾರತ ಹಾಗೂ ಕ್ರೊಯೇಷಿಯಾ ನಡುವೆ ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ, ಶಿಕ್ಷಣ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಗುವ ನಿರೀಕ್ಷೆಯಿದೆ. ವಿಜ್ಞಾನ ಕ್ಷೇತ್ರದಲ್ಲಿ ಸಹಕಾರ ಕಾರ್ಯಕ್ರಮ, ಜಂಟಿ ಸಂಶೋದನೆ ಮತ್ತು ಜ್ಞಾನ ಹಂಚಿಕೆಯನ್ನು ಉತ್ತೇಜಿಸಲಿದ್ದು, ಸಮಗ್ರ ಕೃಷಿ ಒಪ್ಪಂದ ೩೦ ಆದ್ಯತಾ ಪ್ರದೇಶಗಳಲ್ಲಿ ಸಹಕಾರಗಳನ್ನು ಒಳಗೊಂಡಿರಲಿದೆ. ಇದೇ ವೇಳೆ, ಲಲಿತ ಕಲೆಗಳು, ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಮಾಧ್ಯಮ ಕ್ಷೇತ್ರಗಳನ್ನು ವ್ಯಾಪಿಸುವ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮವನ್ನು ೨೦೩೦ರವರೆಗೆ ವಿಸ್ತರಿಸುವ ಕುರಿತು ಒಪ್ಪಂದಕ್ಕೂ ಸಹಿ ಹಾಕುವ ನಿರೀಕ್ಷೆಯಿದೆ.

><><><><<><><><<><><

ಕೇಂದ್ರ ವಾಣಿಜ್ಯ ಸಚಿವ ಪಿಯುಷ್ ಗೋಯಲ್ ಇಂದಿನಿಂದ ಎರಡು ದಿನಗಳ ಪ್ರವಾಸಕ್ಕಾಗಿ ಬ್ರಿಟನ್ ಪ್ರಯಾಣ ಬೆಳೆಸಿದ್ದಾರೆ. ಈ ಭೇಟಿ, ಬ್ರಿಟನ್‌ನೊಂದಿಗಿನ ಆರ್ಥಿಕ ಮತ್ತು ವ್ಯಾಪಾರ ಕಾರ್ಯತಂತ್ರ ಪಾಲುದಾರಿಕೆಯ ಬಲವರ್ಧನೆಯ ಉದ್ದೇಶ ಹೊಂದಿದೆ. ಸಚಿವ ಪಿಯುಷ್ ಗೋಯಲ್, ವಾಣಿಜ್ಯ ಮತ್ತು ವ್ಯಾಪಾರ ಕಾರ್ಯದರ್ಶಿ ಜೊನೆಥನ್ ರೆನಾಲ್ಡ್ಸ್ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಈ ವೇಳೆ ಉಭಯ ನಾಯಕರು, ಮುಕ್ತ ವ್ಯಾಪಾರದ ಮಾತುಕತೆಗಳ ಪ್ರಗತಿ ಪರಿಶೀಲನೆ ನಡೆಸಲಿದ್ದಾರೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

><><><><<><><><<><><

ರಷ್ಯಾದ ವಿಭಾಗದಲ್ಲಿ ಇತ್ತೀಚೆಗೆ ನಡೆದ ದುರಸ್ತಿಗಳ ನಂತರ ಕಕ್ಷೆಯ ಪ್ರಯೋಗಾಲಯದಲ್ಲಿನ ಕಾರ್ಯಾಚರಣೆಗಳನ್ನು ಮೌಲ್ಯಮಾಪನ ಮಾಡಲು ನಾಸಾಗೆ ಅವಕಾಶ ನೀಡುವ ಸಲುವಾಗಿ, ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಆಕ್ಸಿಯಮ್ -೪ ಮಿಷನ್ ಅನ್ನು ಈ ತಿಂಗಳ ೨೨ ಕ್ಕೆ ಮುಂದೂಡಲಾಗಿದೆ. ಇದನ್ನು ಆಕ್ಸಿಯಮ್ ಸ್ಪೇಸ್ ಪ್ರಕಟಿಸಿದೆ. ಆಕ್ಸಿಯಮ್ ಸ್ಪೇಸ್ ಸಂಸ್ಥೆ-ಸ್ಪೇಸ್ ಎಕ್ಸ್ ಫಾಲ್ಕನ್ -೯ ವಾಹಕ, ಡ್ಯಾಗನ್ ಬಾಹ್ಯಾಕಾಶ ನೌಕೆ, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಝ್ವೆಸ್ಡಾ ಘಟಕದ ದುರಸ್ತಿ ಸ್ಥಿತಿ, ಹವಾಮಾನ ಪರಿಸ್ಥಿತಿ ಹಾಗೂ ತಂಡದ ಆರೋಗ್ಯ ಮತ್ತು ಸಿದ್ಧತೆ ಸೇರಿದಂತೆ ಇತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಉಡಾವಣಾ ದಿನಾಂಕವನ್ನು ನಿಗದಿಪಡಿಸಲಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ- ಇಸ್ರೋ ತಿಳಿಸಿದೆ. ಮಹತ್ವದ ಅಂಶಗಳ ಮೌಲ್ಯಮಾಪನಗಳ ನಂತರವೇ ಉಡಾವಣಾ ದಿನಾಂಕ ಸೂಚಿಸಲಾಗಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ. ಆಕ್ಸಿಯಂ ಮಿಷನ್‌ಗೆ ಗಗನಯಾತ್ರಿ ಪೆಗ್ಗಿ ವಿಟ್ಸನ್ ನೇತೃತ್ವ ವಹಿಸಲಿದ್ದು, ಇಸ್ರೋದಿಂದ ಶುಭಾಂಶು ಶುಕ್ಲಾ ಪೈಲೆಟ್ ಆಗಿ ಕಾರ್ಯ ನಿರ್ವಹಿಸಲಿದ್ದಾರೆ.

ಪೋಲ್ಯಾಂಡ್‌ನ ಸ್ಲಾವೋಶ್ ಉರ್ಝ್ನಾನ್ಸ್ಕಿ ಮತ್ತು ಹಂಗೇರಿಯ ಟಿಬರ್ ಕಪು ಯೋಜನೆಯ ತಜ್ಞರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

><><><><<><><><<><><

ಇದೇ ೨೧ ರಂದು ೧೧ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಜಾಗತಿಕವಾಗಿ ಆಚರಿಸಲಾಗುವುದು. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಸುದ್ದಿ ವಿಭಾಗ ಪ್ರಸಾರ ಮಾಡುವ 'ಪ್ರಾಚೀನ ಭಾರತೀಯ ಪರಂಪರೆಯಿಂದ ಜಾಗತಿಕ ಆಂದೋಲನ ವಾಗು ವವರೆಗಿನ ಯೋಗದ ಬೆಳವಣಿಗೆ' ಕುರಿತ ಒಂದು ವರದಿ ಇಲ್ಲಿದೆ.

ವರದಿ..

ಯೋಗದ ಇತಿಹಾಸ, ಭಾರತೀಯ ಪ್ರಾಚೀನ ನಾಗರಿಕತೆಯಲ್ಲಿ ಆಳವಾಗಿ ಬೇರೂರಿದೆ. ಸಿಂಧೂ ಸರಸ್ವತಿ ಕಣಿವೆ ಸಂಸ್ಕೃತಿಯ ಒಂದು ಆಧ್ಯಾತ್ಮಿಕ ಆಚರಣೆಯಾಗಿ ಆರಂಭವಾದ ಯೋಗ, ನಂತರ ಆತ್ಮ ಸಾಕ್ಷಾತ್ಕಾರದತ್ತ ಒಂದು ಶಿಸ್ತುಬದ್ಧ ಮಾರ್ಗವಾಗಿ ಬೆಳೆಯಿತು. ಹಲವಾರು ವರ್ಷಗಳ ಕಾಲ ವಿದ್ವಾಂಸರು, ಕ್ರಿಸ್ತಪೂರ್ವ ೫೦೦ರ ಸುಮಾರಿಗೆ ಬೌದ್ಧ ಧರ್ಮದ ಬೆಳವಣಿಗೆಯ ವೇಳೆ ಯೋಗದ ಉಗಮವಾಯಿತು ಎಂದು ನಂಬಿದ್ದರು. ಆದರೆ, ಸಿಂಧೂ ಸರಸ್ವತಿ ಕಣಿವೆ ನಾಗರಿಕತೆಯ ಪುರಾತತ್ವ ದಾಖಲೆಯ ಪರಿಶೀಲನೆಯ ಬಳಿಕ ಯೋಗ ಅತ್ಯಂತ ಪ್ರಾಚೀನ ಪದ್ಧತಿಯೆಂದು ಸೂಚಿಸಿತು. ನಂತರ ಒಂದು ಶ್ರೀಮಂತ ಶಿಸ್ತುಬದ್ಧ ಪದ್ಧತಿಯಾಗಿ ಪರಿವರ್ತನೆಗೊಂಡ ಯೋಗ, ವೇದ, ಉಪನಿಷತ್ತು ಮತ್ತು ಪತಂಜಲಿ ಯೋಗ ಸೂತ್ರಗಳ ಮೂಲಕ ವಿಸ್ತಾರಗೊಂಡಿತು. ಮಹಾಭಾರತದಲ್ಲಿನ ಆಳವಾದ ಯೋಗದ ಉಲ್ಲೇಖನಗಳಿಂದ ಹಿಡಿದು, ೧೯ ಮತ್ತು ೨೦ನೇ ಶತಮಾನದಲ್ಲಿ ಸ್ವಾಮಿ ವಿವೇಕಾನಂದ ಬಿ.ಕೆ.ಎಸ್.ಐಯ್ಯಂಗರ್‌ರಂತಹ ಶ್ರೇಷ್ಠ ಗುರುಗಳಿಂದ ಯೋಗದ ಪುನರುಜ್ಜೀವನದವರೆಗೆ ಯೋಗ, ಪ್ರಾಚೀನ ಪರಂಪರೆಯಿಂದ ಜಾಗತಿಕ ಆಂದೋಲನವಾಗಿ ರೂಪುಗೊಂಡಿದೆ. ೨೦೧೪ರಲ್ಲಿ ಪ್ರಧಾನಿ ನರೇಂದ್ರ ಮೋದಿ, ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ, ಜೂನ್ ೨೧ ಅನ್ನು ಅಂತಾರಾಷ್ಟ್ರೀಯ ಯೋಗದಿನವನ್ನಾಗಿ ಘೋಷಿಸುವಂತೆ ಪ್ರಸ್ತಾಪಿಸಿದರು. ಈ ನಿರ್ಣಯಕ್ಕೆ ವಿಶ್ವದ ವಿವಿಧ ದೇಶಗಳಿಂದ ಬಾರಿ ಬೆಂಬಲ ಲಭಿಸಿತು. ಅಂದಿನಿಂದ ಜೂನ್ ೨೧ ಅನ್ನು ವಿಶ್ವಾದ್ಯಂತ ಯೋಗದಿನವನ್ನಾಗಿ ಆಚರಿಸಲಾಗುತ್ತಿದೆ. ಇನ್ನು, ಕೆಲವು ದಿನಗಳಲ್ಲಿ ಆಚರಿಸಲ್ಪಡಲಿರುವ ೧೧ನೇ ಅಂತಾರಾಷ್ಟ್ರೀಯ ಯೋಗದಿನದ ಧ್ಯೇಯವಾಕ್ಯ 'ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ' ಎಂಬುದು ಐಕ್ಯತೆ ಮತ್ತು ಯೋಗಕ್ಷೇಮದ ಸಂದೇಶವನ್ನು ಸಾರುತ್ತದೆ. ಧರ್ಮ, ಜಾತಿ, ರಾಷ್ಟ್ರೀಯತೆ

ಎಂಬ ಭೇದವಿಲ್ಲದೆ ಯೋಗ ಎಲ್ಲರಿಗೂ ಆರೋಗ್ಯವಂತ, ಸಮತೋಲಿತ ಮತ್ತು ಅರ್ಥಪೂರ್ಣ ಜೀವನದೆಡೆಗಿನ ಮಾರ್ಗವನ್ನು ಒದಗಿಸುತ್ತದೆ.

><><><><><><><<><><

ಇದೇ ೨೧ರಿಂದ ೨೫ರವರೆಗೆ ನಡೆಯಲಿರುವ ೪ ರಾಷ್ಟ್ರಗಳ ಹಾಕಿ ಪಂದ್ಯಾವಳಿಯಲ್ಲಿ ಭಾಗವಹಿಸಲು ಭಾರತೀಯ ಕಿರಿಯರ ಪುರುಷರ ಹಾಕಿ  ತಂಡ ಇಂದು ಬರ್ಲಿನ್‌ಗೆ ತೆರಳಿದೆ. ಇದೇ ೨೧ರಂದು ಆತಿಥೇಯ ಜರ್ಮನಿ ತಂಡದ ವಿರುದ್ಧ ಭಾರತ ಸೆಣಸಲಿದೆ. ನಾಯಕ ಅರೈಜೀತ್ ಸಿಂಗ್ ಹುಂಡಾಲ್ ನೇತೃತ್ವದ ತಂಡವು ಇದೇ ೨೧ ರಂದು ಆತಿಥೇಯ ಜರ್ಮನಿ ವಿರುದ್ಧ ತನ್ನ ಮೊದಲ ಗುಂಪು ಹಂತದ ಪಂದ್ಯವನ್ನು ಆಡಲಿದೆ. ಇದೇ ೨೨ ರಂದು ಆಸ್ಟ್ರೇಲಿಯಾ ಮತ್ತು ಇದೇ ೨೪ ರಂದು ಸ್ಪೇನ್ ವಿರುದ್ಧ ಸೆಣಸಲಿದೆ.

><><><><><><><<><><